**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 05.07.2023
ಮು. ಪಾಟಿ ಸವಾಲು : 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ

ಕಾಳೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ಹೆಸರು ಮರಿಯಮ್ಮ ಎಂದರೆ ಸರಿ. ಅವರಿಗೆ ಇಬ್ಬರು ಮಕ್ಕಳು ಅವರೆಂದರೆ ನಾನು ಮತ್ತು ಮಹದೇವಮ್ಮ ಎಂದರೆ ಸರಿ. ಮಹದೇವಮ್ಮ ಈಗ ಮೃತರಾಗಿದ್ದಾರೆ ಎಂದರೆ ಸರಿ.

ಕಾಳೇಗೌಡರ 2 ನೇ ಹೆಂಡತಿ ನಾಗಮ್ಮ ರವರಿಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ಮಗಳನ್ನು ನಾಗಮ್ಮನ ಮಗನಾದ ಗವಿಸಿದ್ದೇಗೌಡ ರವರಿಗೆ ಮದುವೆ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ನನ್ನ ಮಗಳಾದ ಸವಿತಾ ಈಗ ಮೃತರಾಗಿದ್ದಾರೆ ಎಂದರೆ ಸರಿ.

ನ್ಯಾಯಾಲಯದಲ್ಲಿ ಕೇಸು ದಾಖಲು ಮಾಡಿ ಗವಿಸಿದ್ದೇಗೌಡರಿಂದ ಅವರ ಮಕ್ಕಳ ಪರವಾಗಿ ಜೀವನಾಂಶ ಪಡೆಯುತ್ತಿದ್ದೇವೆ ಎಂದರೆ ಸರಿ. ಜೀವನಾಂಶ ಪಡೆಯುತ್ತಿರುವ ಕೇಸಿನಲ್ಲಿ ದಾವೆಯ ಸ್ವತ್ತುಗಳನ್ನು ಸೇರಿಸಿಲ್ಲ.

ಕಾಳೇಗೌಡರ ಕುಟುಂಬ ದೊಡ್ಡ ಕುಟುಂಬ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ತೋರಿಸಿರುವ ಆಸ್ತಿಗಳ ಸ.ನಂ. ಮತ್ತು ಚೆಕ್ಕು ಬಂದಿಯನ್ನು ಹೇಳಲಾಗುವುದಿಲ್ಲ ಕಾರಣ ನನಗೆ ಓದಲು ಬರುವುದಿಲ್ಲ. ರಂಗನಾಥಪುರ ಗ್ರಾಮದಲ್ಲಿನ ಸ.ನಂ.86, ಸ.ನಂ.224, ಸ.ನಂ.164, ಸ.ನಂ.127 ಸ್ವತ್ತುಗಳು ನಮ್ಮ ಕುಟುಂಬದ ಸ್ವತ್ತುಗಳು ಆಗಿದ್ದರೂ ಕೂಡ ಇಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಮರಿಯಮ್ಮ ನವರನ್ನು ಕಾಳೇಗೌಡರ ಕುಟುಂಬಕ್ಕೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಅಲ್ಲಿಯೂ ಕೂಡ ಆಸ್ತಿ ಇದೆ ಎಂದರೆ ಸರಿ. ನನ್ನ ತಂದೆ ಯಾವ ವರ್ಷದಲ್ಲಿ ಮೃತರಾಗಿದ್ದಾರೆಂದು ನೆನಪಿಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಉದ್ದೇಶಪೂರ್ವಕವಾಗಿ ದಾವಾ ಸ್ವತ್ತುಗಳ ಸಂಬಂಧ ಭಾಗ ಬರಬೇಕೆಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾಗಮ್ಮ ಮತ್ತು ಆಕೆಯ ಮಕ್ಕಳೆಲ್ಲಾ ಸೇರಿ ದಿಃ 30.06.2007 ರಲ್ಲಿ ಒಟ್ಟು ಕುಟುಂಬದ ಸ್ವತ್ತುಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಬಂದ ಸ್ವತ್ತಿನಲ್ಲಿಯೇ ಗವಿ ಸಿದ್ದೇಗೌಡ ಆತನ ಮಕ್ಕಳಿಗೆ ಜೀವನಾಂಶ

ಕೊಡುತ್ತಿದ್ದಾರೆ ಎಂದರೆ ಸುಳ್ಳು. ನಾಗಮ್ಮ ನವರ ಕುಟುಂಬದಲ್ಲಿ ಆದ ವಿಭಾಗಕ್ಕೆ ನಾನು ಸಮ್ಮತಿ ಕೂಡ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.